# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್**

ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**


**ಭಾಗ ೨೬**

## ಡೆಟ್ರಾಯ್ಟ್‌ನಲ್ಲಿ ಸ್ವಾಮಿ ವಿವೇಕಾನಂದರು (ಮುಂದುವರಿದ ಭಾಗ)

ಸ್ವಾಮಿ ವಿವೇಕಾನಂದರು ಡೆಟ್ರಾಯ್ಟ್ ನಗರದ ತಮ್ಮ ವಾಸ್ತವ್ಯವನ್ನು ಫೆಬ್ರವರಿ ೧೨, ೧೮೯೪ರಿಂದ ಫೆಬ್ರವರಿ ೨೩, ೧೮೯೪ರ ವರೆಗೆ ಮುಂದುವರಿಸಿದರು. ಅವರು ಮೊದಲು ಒಂದು ವಾರ ಕಾಲ ಹೆಚ್ಚಿಗೆ ಇರಬೇಕು ಎಂದುಕೊಂಡಿದ್ದರು. ಆ ಅವಧಿಯಲ್ಲಿ ಯೂನಿಟೇರಿಯನ್ ಚರ್ಚಿನಲ್ಲಿ ಮೂರು ಪ್ರವಚನಗಳನ್ನು ನೀಡಬೇಕೆಂದು ನಿಗದಿಯಾಗಿತ್ತು. ಆದರೆ ನೂರಾರು ಜನರು, ಈಗಾಗಲೇ ಅವರ ಭಾಷಣವನ್ನು ಕೇಳಿದವರು, ಮತ್ತೆ ಮತ್ತೆ ಅವರ ಭಾಷಣಗಳನ್ನು ಕೇಳಬೇಕೆಂದು ಬಹಳ ಉತ್ಸುಕರಾಗಿದ್ದರು. ಹಾಗೆಯೇ ಸ್ವಾಮೀಜಿಯವರ ಭಾಷಣವನ್ನು ಇನ್ನೂ ಕೇಳದೆ ಇದ್ದ ಅನೇಕ ಜನರು ಅವರ ಪ್ರವಚನವನ್ನು ಒಮ್ಮೆಯಾದರೂ ಕೇಳಬೇಕೆಂಬ ತವಕದಲ್ಲಿ ಇದ್ದರು. ಇವರೆಲ್ಲರ ಬೇಡಿಕೆಯನ್ನು ಈಡೇರಿಸಲು ಸ್ವಾಮೀಜಿ ಯೂನಿಟೇರಿಯನ್ ಚರ್ಚಿನಲ್ಲಿ ಫೆಬ್ರವರಿ ೧೯, ೧೮೯೪ ರಂದು 'ಭಗವತ್ ಪ್ರೇಮ'ದ ಬಗ್ಗೆ ಅದ್ಭುತವಾದ ಭಾಷಣವನ್ನು ಮಾಡಿದರು. ಇದರ ವರದಿಗಳು ಫ್ರೀ ಪ್ರೆಸ್ ಜರ್ನಲ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಯಿತು. ಅದರ ತುಣುಕುಗಳನ್ನು ಸ್ವಾಮೀಜಿಯವರ ಅನುಯಾಯಿಯಾದ ಮೇರಿ ಫನ್‌ಕಿ ಎಂಬ ಮಹಿಳೆ ಬಹಳ ವರ್ಷಗಳ ನಂತರ, ಸ್ವಾಮಿ ಬ್ರಹ್ಮಾನಂದರಿಗೆ ಕಳಿಸಿಕೊಟ್ಟರು. ಈ ವರದಿಯ ಸಂಕ್ಷಿಪ್ತ ರೂಪ ಹೀಗಿದೆ:

### ಪ್ರೇಮದ ಬಗ್ಗೆ ಸ್ವಾಮಿ ವಿವೇಕಾನಂದರ ಪ್ರವಚನ

''ಸ್ವಾಮಿ ವಿವೇಕಾನಂದರು 'ಭಗವತ್ ಪ್ರೇಮ'ದ ಬಗ್ಗೆ ಯೂನಿಟೇರಿಯನ್ ಚರ್ಚಿನಲ್ಲಿ ನೆನ್ನೆಯ ರಾತ್ರಿ ಪ್ರವಚನವನ್ನು ನೀಡಿದರು. ಇದಕ್ಕೆ ಅತ್ಯಧಿಕ ಸಂಖ್ಯೆಯಲ್ಲಿ ಜನರು ನೆರೆದಿದ್ದರು. ಸಾಮಾನ್ಯ ಜನರು ಭಗವಂತನನ್ನು ಪ್ರೀತಿಸುವುದು ಅವನು ಬೇಕೆಂದಲ್ಲ , ತಮ್ಮ ಸ್ವಾರ್ಥವನ್ನು ಪೂರೈಸಿಕೊಳ್ಳಲು ಎಂದು ಅವರು ಈ ಭಾಷಣದಲ್ಲಿ ಮುಖ್ಯವಾಗಿ ಎತ್ತಿಹೇಳಿದರು. ನೈಜ ಪ್ರೇಮವೆಂಬುದು ಸಂಪೂರ್ಣವಾಗಿ ನಿಸ್ವಾರ್ಥತೆಯಿಂದ ಕೂಡಿದ ಸದ್ಗುಣ; ಅದರಲ್ಲಿ ನಾವು ಪ್ರೀತಿಸುವ ವಸ್ತುವನ್ನು ವೈಭವೀಕರಿಸುವುದು ಮತ್ತು ಆರಾಧಿಸುವುದು – ಇವುಗಳಿಗಿಂದ ಮಿಗಿಲಾಗಿ ಯಾವ ಚಿಂತನೆಯೂ ಇರುವುದಿಲ್ಲ. ಈ ದೈವೀ ಗುಣದಲ್ಲಿ ಭಗವಂತನಲ್ಲಿ ಶರಣಾಗತನಾಗುವುದು ಮತ್ತು ಅವನನ್ನು ಆರಾಧಿಸುವುದನ್ನು ಬಿಟ್ಟರೆ, ಇದಕ್ಕೆ ಪ್ರತಿಯಾಗಿ ಅಪೇಕ್ಷಿಸುವುದು ಏನೂ ಇರುವುದಿಲ್ಲ.''



ಯೂನಿಟೇರಿಯನ್ ಚರ್ಚ್, ಡೆಟ್ರಾಯ್ಟ್

ಯೂನಿಟೇರಿಯನ್ ಚರ್ಚ್‌ನಲ್ಲಿ ನಡೆದ ಉಪನ್ಯಾಸವನ್ನು ಕೇಳಲು ಬಂದವರಲ್ಲಿ ಬಹುತೇಕರು ಡೆಟ್ರಾಯ್ಟ್ ನಗರದ ಜೆಫರ್‌ಸನ್ ಅವೆನ್ಯೂ ಮತ್ತು ವುಡ್‌ವರ್ಡ್ ಅವೆನ್ಯೂ ಎಂಬ ಪ್ರತಿಷ್ಠಿತ ಶ್ರೀಮಂತರು ವಾಸಮಾಡುತ್ತಿರುವ ಬಡಾವಣೆಗಳಿಗೆ ಸೇರಿದವರು. ಇದರಿಂದಾಗಿ, ಸ್ವಾಮೀಜಿಯ ಕೆಲವು ಟೀಕಾಕಾರರು ಸ್ವಾಮಿ ವಿವೇಕಾನಂದರು ಶ್ರೀಮಂತರ ಕೈಗೊಂಬೆಯಾಗಿದ್ದಾರೆ ಎಂದು ಆಪಾದನೆ ಮಾಡುತ್ತಿದ್ದರು. ನೈಜ ಸಂಗತಿ ಎಂದರೆ, ಸ್ವಾಮೀಜಿ ಎಲ್ಲ ವರ್ಗದ ಜನರನ್ನು ಸಮಾನವಾಗಿ ನೋಡುತ್ತಿದ್ದರು. ಶ್ರೀಮಂತ ವರ್ಗದವರು ಅವರ ಭಾಷಣಗಳಿಗೆ ಆಕರ್ಷಿತರಾಗಿದ್ದರೆ, ಅದು ಅವರ ತಪ್ಪೇನೂ ಅಲ್ಲ. ಅಲ್ಲದೆ, ಇಂಥ ಪ್ರತಿಷ್ಠಿತ ವರ್ಗದವರ ಮನೋಭಾವವನ್ನು ಅವರ ಮುಂದೆಯೇ ಸ್ವಾಮೀಜಿ ಸಾರಾಸಗಟಾಗಿ ಖಂಡಿಸುತ್ತಿದ್ದರು. ಆ ವರ್ಗದ ಸಭ್ಯ ಮತ್ತು ಸುಶಿಕ್ಷಿತ ಜನರು ಸ್ವಾಮೀಜಿಯವರು ತಮ್ಮ ಮೇಲೆ ಮಾಡಿದ ಟೀಕೆಟಿಪ್ಪಣಿಗಳನ್ನು ರಚನಾತ್ಮಕ ದೃಷ್ಟಿಯಿಂದ ನೋಡುತ್ತಿದ್ದರಷ್ಟೇ ಅಲ್ಲ , ಅವುಗಳನ್ನು ಭಾರೀ ಕರತಾಡನದ ಮೂಲಕ ಸ್ವಾಗತಿಸುತ್ತಿದ್ದರು.

ಇಷ್ಟಾದರೂ ಸಂಪ್ರದಾಯವಾದಿ ಕ್ರೈಸ್ತರ ಗುಂಪೊಂದು ಸ್ವಾಮೀಜಿಯವರನ್ನು ಈ ವಿಷಯದಲ್ಲಿ ಖಂಡಿಸುತ್ತಲೇ ಇತ್ತು. ಅವರ ಪ್ರಕಾರ ಸ್ವಾಮೀಜಿ ಒಂದು ಫ್ಯಾಷನ್ ಧರ್ಮವನ್ನು ಬೋಧಿಸುತ್ತಾರೆ; ಹಾಗೆಂದೇ ಅವರು ಶ್ರೀಮಂತರನ್ನು ಆಕರ್ಷಿ

ಸುತ್ತಾರೆ. ಆದರೆ ಸ್ವಾಮೀಜಿ ಅಮೆರಿಕಾದ ತಮ್ಮ ಪ್ರವಚನಗಳ ಮೂಲಕ ಭಾರತದ ಬಡವರಿಗಾಗಿ ಪುನರುದ್ಧಾರದ ಕಾರ್ಯವನ್ನು ಮಾಡಲು ತೊಡಗಿದ್ದರು. ಹೀಗಾಗಿ ಸ್ವಾಮೀಜಿ ಶ್ರೀಮಂತರ ಪರವಾಗಿದ್ದಾರೆ ಎನ್ನುವುದು ಹಾಸ್ಯಾಸ್ಪದವಾದ ಮಾತೇ ಸರಿ. ಇನ್ನೊಂದು ಅಪವಾದವನ್ನೂ ಸ್ವಾಮೀಜಿಯ ಮೇಲೆ ಮಾಡಲಾಯಿತು. ಹಿಂದೂ ಸಂನ್ಯಾಸಿಗಳು ಹಣವನ್ನು ಮುಟ್ಟುವುದಿಲ್ಲ ಎಂದು ಸ್ವಾಮೀಜಿ ಹೇಳುತ್ತಿದ್ದರು. ಆದರೆ ಅವರು ತಮ್ಮ ಮಾತಿಗೆ ವಿರುದ್ಧವಾಗಿ ಶ್ರೀಮಂತರ ಹತ್ತಿರ ಮಾತ್ರವೇ ಆತಿಥ್ಯವನ್ನು ಪಡೆಯುತ್ತಿದ್ದಾರೆ ಎಂದು ಕೆಲವರು ಟೀಕಾಪ್ರಹಾರ ಮಾಡುತ್ತಿದ್ದರು. ಆದರೆ ವಾಸ್ತವವಾಗಿ, ಸ್ವಾಮೀಜಿ ಬಡವ ಮತ್ತು ಬಲ್ಲಿದ – ಇಬ್ಬರ ಆತಿಥ್ಯವನ್ನೂ ಸಮಾನಭಾವದಿಂದ ಸ್ವೀಕರಿಸು_ದ್ದರು. ಇದರಲ್ಲಿ ಭೇದಭಾವವನ್ನು ಮಾಡುತ್ತಿರಲಿಲ್ಲ. ಅಲ್ಲದೆ, ಸ್ವಾಮೀಜಿ ಸಂಗ್ರಹಿಸಿದ ಹಣ ಭಾರತದ ಪುನರುತ್ಥಾನಕ್ಕಾಗಿ ಅವರು ಪರಿಕಲ್ಪಿಸಿದ ಸಂಸ್ಥೆಯೊಂದನ್ನು ಸ್ಥಾಪಿಸುವ ಸಲುವಾಗಿ ಇತ್ತೇ ಹೊರತು, ಅವರ ವೈಯಕ್ತಿಕ ಸುಖಕ್ಕಾಗಿ ಅಲ್ಲ.

ಹೌದು, ಸ್ವಾಮೀಜಿಯವರ ಭಾಷಣವನ್ನು ಕೇಳಲು ಬರುತ್ತಿದ್ದ ಸಭಿಕರು ಅಮೆರಿಕ ದೇಶದ ಪ್ರತಿಷ್ಠಿತ ಜನರು. ಆದರೆ ಸ್ವಾಮೀಜಿ ತಾವು ಕ್ರೈಸ್ತ ನಾಗರಿಕತೆಯ ದೋಷಗಳನ್ನು ಎತ್ತಿ ಹೇಳುವ ಸಮಯದಲ್ಲಿ ಅವರನ್ನೇ ಕಟುವಾಗಿ ನಿಂದಿಸುತ್ತಿದ್ದರು. ಇದನ್ನು ನಾವು ಮರೆಯಬಾರದು.

ಸ್ವಾಮಿ ವಿವೇಕಾನಂದರು ಡೆಟ್ರಾಯ್ಟ್ ನಗರದ ತಮ್ಮ ಐದನೆಯ ಉಪನ್ಯಾಸವನ್ನು ನೀಡಿದ್ದು ತಮ್ಮ ಸ್ನೇಹಿತವೃಂದದ ಒತ್ತಾಯದಿಂದ. ಈ ಪ್ರಸಿದ್ಧವಾದ ಪ್ರವಚನ ಆಯೋಜಿತವಾದದ್ದು ಅವರ ಆತಿಥೇಯರಾದ ಶ್ರೀಮತಿ ಬ್ಯಾಗ್ಲಿ ಅವರ ಮನೆಯಲ್ಲಿ, ಫೆಬ್ರವರಿ ೨೧, ೧೮೯೪ರ ಬುಧವಾರ ಮಧ್ಯಾಹ್ನ. ಈ ಭಾಷಣದ ವರದಿಯನ್ನು ಫ್ರೀ ಪ್ರೆಸ್ ಜರ್ನಲ್ ಪತ್ರಿಕೆಯು ಪ್ರಕಟಿಸಿತು. ಅದು ಹೀಗಿದೆ:

### ಇದೊಂದು ಅದೃಷ್ಟದ ವಿರೋಧಾಭಾಸ : ಕ್ರೈಸ್ತ ಧರ್ಮದ ಪ್ರಚಾರ ವೈಭೋಗದ ಹೆಸರಿನಲ್ಲಿ

''ಸ್ವಾಮಿ ವಿವೇಕಾನಂದರ ಭಾಷಣಗಳಲ್ಲಿಯೇ ಅತ್ಯಂತ ಆಸಕ್ತಿ ಕರವಾದ ಭಾಷಣವು ನಿನ್ನೆ ಮಧ್ಯಾಹ್ನ ಶ್ರೀಮತಿ ಜಾನ್ ಜೆ ಬ್ಯಾಗ್ಲಿ ಅವರ ಮನೆಯಲ್ಲಿ ಜರುಗಿತು. ಅವರು ಈ ಭಾಷಣದಲ್ಲಿ ಹಿಂದೂ ತತ್ತ್ವಶಾಸ್ತ್ರದ ವಿವಿಧ ಶಾಖೆಗಳ ಬಗ್ಗೆ ಮಾತನಾಡಿದರು. ಬ್ಯಾಗ್ಲಿ ಅವರ ಮನೆಯ ಬೃಹತ್ ಕೊಠಡಿಗಳು ಜನರಿಂದ ತುಂಬಿತುಳುಕುತ್ತಿದ್ದವು. ಅವರು ಭಾರತದಲ್ಲಿ ಪ್ರಚಲಿತವಾಗಿರುವ ವಿವಿಧ ತತ್ತ್ವಶಾಸ್ತ್ರಗಳ ಬಗ್ಗೆ ಎರಡು ಗಂಟೆಗಳ ಕಾಲ ಮಾತನಾಡಿದರು. ಭಾರತದಲ್ಲಿ ಆಧ್ಯಾತ್ಮಿಕ ವಿಜ್ಞಾನವು ಎರಡು ಸಾವಿರ ವರ್ಷಗಳ ಹಿಂದೆಯೇ ತನ್ನ ಉಚ್ಚ ನೆಲೆಯನ್ನು ತಲುಪಿ ತ್ತೆಂದು ಅವರು ತೋರಿಸಿಕೊಟ್ಟರು. ಸಂಸ್ಕೃತ ಸಾಹಿತ್ಯದಲ್ಲಿ ಬರುವ ಮನೋಹರ ಕಥೆಗಳಿಂದ ಅವರ ಭಾಷಣವು ಕೂಡಿತ್ತು.''

ಈ ಪ್ರವಚನವು ಸಾರ್ವಜನಿಕವಾಗಿದ್ದರೂ, ಶ್ರೀಮತಿ ಬ್ಯಾಗ್ಲಿ ತಮ್ಮ ಅನೇಕ ಸ್ನೇಹಿತರನ್ನು ವಿಶೇಷವಾಗಿ ಆಮಂತ್ರಿಸಿದ್ದರು. ಈ ಸಂದರ್ಭದಲ್ಲಿ ಅವರು ಹೀಗೆ ಬರೆಯುತ್ತಾರೆ:

''...ಸ್ವಾಮಿ ವಿವೇಕಾನಂದರು ಆಹ್ವಾನಿತ ಅತಿಥಿಗಳ ಸಮ್ಮುಖದಲ್ಲಿ ನಮ್ಮ ಮನೆಯ ಪಡಸಾಲೆಯಲ್ಲಿ ಪ್ರವಚನ ಮಾಡಿದರು. ಸುಮಾರು ೧೨೮ ಜನರು ಸೇರಿದ್ದರು. ಎಲ್ಲರೂ ಆರಾಮವಾಗಿ ಕುಳಿತುಕೊಳ್ಳುವಷ್ಟು ಸ್ಥಳ ಇತ್ತು. ಪ್ರತಿಯೊಬ್ಬರಿಗೂ ಒಂದು ಡಾಲರ್ ಶುಲ್ಕವನ್ನು ವಿಧಿಸಲಾಗಿತ್ತು. ಅವರಲ್ಲಿ ವಕೀಲರು, ನ್ಯಾಯಾಧೀಶರು, ಧಾರ್ಮಿಕ ಪ್ರಚಾರಕರು, ಸೈನ್ಯದ ಅಧಿಕಾರಿಗಳು, ರಾಜಕಾರಣಿಗಳು, ವೈದ್ಯರು ಮತ್ತು ಉದ್ಯೋಗಿಗಳು ಇದ್ದರು. ಅವರೆಲ್ಲ ತಮ್ಮ ಪತ್ನಿಯರು ಮತ್ತು ಮಕ್ಕಳೊಡನೆ ಬಂದಿದ್ದರು. ಸ್ವಾಮಿ ವಿವೇಕಾನಂದರು ಸುಮಾರು ಎರಡು ಗಂಟೆಗಳ ಕಾಲ 'ಪ್ರಾಚೀನ ಹಿಂದೂ ತತ್ತ್ವಶಾಸ್ತ್ರಜ್ಞರು ಮತ್ತು ಅವರ ಬೋಧನೆ'ಯ ವಿಚಾರವಾಗಿ ಮಾತನಾಡಿದರು. ಸಭಿಕರೆಲ್ಲರೂ ಆಸಕ್ತಿಪೂರ್ಣರಾಗಿ ಕಡೆಯವರೆಗೆ ಸ್ವಾಮೀಜಿಯವರ ಭಾಷಣವನ್ನು ಕೇಳಿಸಿಕೊಂಡರು. ಎಲ್ಲೆಲ್ಲಿ ಅವರು ಭಾಷಣ ಮಾಡಿದರೋ, ಅಲ್ಲೆಲ್ಲ ಜನರು ಸಂತೋಷದಿಂದ ಆಲಿಸಲು ಬರುತ್ತಿದ್ದರು ಮತ್ತು ಹೇಳುತ್ತಿದ್ದರು: 'ಹೀಗೆ ಭಾಷಣ ಮಾಡುವವರನ್ನು ನಾನೆಂದೂ ಕೇಳಿರಲಿಲ್ಲ.' ಸ್ವಾಮೀಜಿ ಯಾರನ್ನೂ ನೋಯಿಸುತ್ತಿರಲಿಲ್ಲ, ಅದಕ್ಕೆ ಬದಲಾಗಿ ಎಲ್ಲರನ್ನೂ ಉನ್ನತ ನೆಲೆಗೆ ಎತ್ತುತ್ತಿದ್ದರು. ಅವರ ವಿಚಾರಗಳಲ್ಲಿ ಜನರು ಮಾನವ ನಿರ್ಮಿತ ಕಂದಾಚಾರಗಳು ಮತ್ತು ಮತಗಳನ್ನು ಮೀರಿದ ಯಾವುದೋ ಒಂದು ಅದ್ಭುತ ಸಂಗತಿಯನ್ನು ಕಾಣುತ್ತಿದ್ದರು. ಸ್ವಾಮಿ ವಿವೇಕಾನಂದರು ತಮ್ಮ ಧಾರ್ಮಿಕ ಭಾವನೆಗಳಲ್ಲಿಯೂ ಒಂದಾಗಿದ್ದಾರೆ ಎಂಬ ಭಾವನೆಯನ್ನು ಅದು ಜನರಲ್ಲಿ ಮೂಡಿಸುತ್ತಿತ್ತು.''

ಆ ಉಪನ್ಯಾಸದ ಕಡೆಯಲ್ಲಿ ಸ್ವಾಮೀಜಿ ಹೀಗೆ ಘೋಷಿಸಿದರು: ''ನೀವು ನಿಜವಾದ ಕ್ರೈಸ್ತರೇ ಅಲ್ಲ.'' ''ಒಂದು ದೇಶವಾಗಿ ನೀವು ಕ್ರೈಸ್ತರಲ್ಲವೇ ಅಲ್ಲ. ಕ್ರಿಸ್ತನೆಡೆಗೆ ಹಿಂತಿರುಗಿ ಹೋಗಿ! ಆತನಿಗೆ ತಲೆಯೆತ್ತುವುದಕ್ಕೆ ಎಲ್ಲೂ ಜಾಗವಿಲ್ಲದ ಹಾಗಿದೆ. ಆದ ರಿಂದ ಮೊದಲ ಆತನ ಕಡೆಗೆ ಹಿಂತಿರುಗಿರಿ... ನಿಮ್ಮ ಧರ್ಮವು ವೈಭೋಗದ ಹೆಸರಿನಲ್ಲಿ ಪ್ರಚಾರವಾಗುತ್ತಿದೆ. ಇದೆಂಥ ವಿರೋಧಾಭಾಸ! ನೀವು ನೈಜ ಜೀವನವನ್ನು ನಡೆಸಬೇಕಾದರೆ ಈ ಮನೋಭಾವವನ್ನು ಪರಿವರ್ತಿಸಿಕೊಳ್ಳಿರಿ. ನಾನು ಈ ದೇಶದಲ್ಲಿ ಕೇಳಿರುವುದಲ್ಲೆವೂ ಕೇವಲ ಬೂಟಾಟಿಕೆಯಷ್ಟೇ. ನಿಮ್ಮ ದೇಶವು ಬದುಕಬೇಕಾದರೆ, ಮತ್ತೊಮ್ಮೆ ಕ್ರಿಸ್ತನ ಬಳಿ ಹಿಂದಿರುಗಿರಿ. ನೀವು ದೇವರನ್ನು ಮತ್ತು ಸೈತಾನನ್ನು ಒಂದೇ ಸಮಯದಲ್ಲಿ ಆರಾಧಿಸಲಾರಿರಿ. ಈ ಎಲ್ಲ ಸಂಪತ್ತು, ವೈಭೋಗ ಕ್ರಿಸ್ತನಿಂದ ಬಂದದ್ದೇನು?! ಈ ಎಲ್ಲ ಪೊಳ್ಳುನಂಬಿಕೆಗಳನ್ನು ಏಸುಕ್ರಿಸ್ತನು ಸಾರಾಸಗಟಾಗಿ ತಿರಸ್ಕರಿಬಿಡುತ್ತಿದ್ದನು! ಸೈತಾನನ ಜೊತೆಗೆ ಇರುವ ಸಂಪತ್ತೆಲ್ಲವೂ ಅಶಾಶ್ವತವಾದುದು, ಕೇವಲ ಕ್ಷಣಕಾಲ ಇರು

ವಂಥದ್ದು. ನಿಜವಾಗಿ ಶಾಶ್ವತವಾದದ್ದು ಇರುವುದು ಕೇವಲ ಭಗವಂತನಲ್ಲಿ ಮಾತ್ರ. ನೀವು ಕ್ರಿಸ್ತನನ್ನು ಮತ್ತು ಭೌತಿಕ ಸಂಪತ್ತು – ಈ ಎರಡನ್ನೂ ಕೂಡಿಸಿಕೊಂಡು ಜೀವಿಸುವುದಾದರೆ, ಒಳ್ಳೆಯದು. (ಆದರೆ ಹಾಗೆ ಮಾಡಲು ಸಾಧ್ಯವಿಲ್ಲ) ಈ ರೀತಿ ಮಾಡಲು ಸಾಧ್ಯವಾಗದಿದ್ದರೆ, ನೀವು ಕ್ರಿಸ್ತನ ಹತ್ತಿರ ಹಿಂದಿರುಗುವುದು ಒಳ್ಳೆಯದು. ಹಾಗೆ ಮಾಡಿದಾಗ, ನಿಮ್ಮ ಭೌತಿಕ ಸಂಪತ್ತನ್ನು ತ್ಯಾಗ ಮಾಡಬೇಕಾಗುತ್ತದೆ. ಕ್ರಿಸ್ತನಿಲ್ಲದೆ ಅರ ಮನೆಗಳಲ್ಲಿ ವಾಸಿಸುವುದಕ್ಕಿಂತ, ಕ್ರಿಸ್ತನ ಸಾನ್ನಿಧ್ಯದಲ್ಲಿ ಹರಕಲು ಬಟ್ಟೆಯನ್ನು ಉಂಟುಕೊಂಡು ಜೀವಿಸುವುದೇ ಒಳ್ಳೆಯದು!''

ಸ್ವಾಮೀಜಿಯವರ ಇನ್ನೊಂದು ಮಾತು ರಾಮಬಾಣದಂತೆ ನುಗ್ಗಿಬಂದು ಜನರಲ್ಲಿ ಅಲ್ಲೋಲಕಲ್ಲೋಲವನ್ನೇ ಮಾಡಿತು:

''ನಿಮ್ಮ ಎಲ್ಲ ಕೊಚ್ಚಿಕೊಳ್ಳುವ ಮಾತುಗಳು ಒಂದೆಡೆ ಇರಲಿ. ನಿಮ್ಮ ಕ್ರೈಸ್ತಧರ್ಮವು ಕತ್ತಿಯ ಬಲವಿಲ್ಲದೆ ಎಲ್ಲಿ ತಾನೇ ಯಶಸ್ಸನ್ನು ಪಡೆದುಕೊಂಡಿದೆ, ತೋರಿಸಬಲ್ಲಿರಾ? ಇಡೀ ಜಗತ್ತಿನಲ್ಲಿ ಅಂಥ ಒಂದು ಸ್ಥಳವನ್ನಾದರೂ ನನಗೆ ತೋರಿಸಿರಿ, ನೋಡೋಣ. ಇಡೀ ಕ್ರೈಸ್ತಧರ್ಮದ ಇತಿಹಾಸದಲ್ಲಿಯೇ – ಒಂದೇ ಒಂದು ಅಂಥ ಪ್ರಸಂಗ ಕಾಣಸಿಗುವುದಿಲ್ಲ. ನಾನು ಎರಡನೆಯ ಅಂಥ ಘಟನೆಯನ್ನು ಅಪೇಕ್ಷಿಸುವುದಿಲ್ಲ. ನಿಮ್ಮ ಹಿಂದಿನ ತಲೆಮಾರಿನವರು ಹೇಗೆತಾನೇ ಕ್ರೈಸ್ತಧರ್ಮಕ್ಕೆ ಪರಿವರ್ತನೆಗೊಂಡರು ಎನ್ನುವುದು ನನಗೆ ಚೆನ್ನಾಗಿ ಗೊತ್ತು. ಅವರಿಗೆ ಬೇರೆ ಆಯ್ಕೆಯೇ ಇರಲಿಲ್ಲ. ಕ್ರೈಸ್ತಧರ್ಮಕ್ಕೆ ಸೇರಬೇಕು, ಇಲ್ಲವೇ ಕೊಲ್ಲಲ್ಪಡಬೇಕು. ಅಷ್ಟೇ ಅವರಿಗೆ ಇದ್ದದ್ದು.''

ಸ್ವಾಮಿ ವಿವೇಕಾನಂದರು ಡೆಟ್ರಾಯ್ಟ್ ನಗರದಲ್ಲಿ ಅದೆಷ್ಟು ಪ್ರಸಿದ್ಧರಾಗಿದ್ದರೆಂದರೆ, ಆ ಕಾಲದಲ್ಲಿ ನಡೆದ ಒಂದು ಮಕ್ಕಳ ಚಿತ್ರವಿಚಿತ್ರ ವೇಷಸ್ಪರ್ಧೆಯಲ್ಲಿ ಒಂದು ಮಗು ಸ್ವಾಮೀಜಿಯವರಂತೆಯೇ ವೇಷಭೂಷಣವನ್ನು ಧರಿಸಿ ಭಾಗವಹಿಸಿತು; ಎಲ್ಲರ ಗಮನವನ್ನು ಸೆಳೆಯಿತು.

ಸ್ವಾಮೀಜಿ ಶ್ರೀಮತಿ ಹೇಲ್ ಅವರಿಗೆ ಬರೆದ ಪತ್ರದ ಪ್ರಕಾರ, ೨೦೦ ಡಾಲರುಗಳನ್ನು ತಮ್ಮ ಸಾರ್ವಜನಿಕ ಭಾಷಣಗಳಿಂದಲೂ, ೨೯೨ ಡಾಲರುಗಳನ್ನು ತಮ್ಮ ಇತರ ಭಾಷಣಗಳಿಂದಲೂ ಹಾಗೂ ೧೦೦ ಡಾಲರುಗಳನ್ನು ಒಬ್ಬ ಮಹಿಳೆಯ ಕೊಡುಗೆಯಿಂದಲೂ ಸ್ವೀಕರಿಸಿದರು. ಶ್ರೀ ಫ್ರೀರ್ ಎಂಬ ಉದ್ಯಮಿಯು ನಂತರ ೨೦೦ ಡಾಲರುಗಳನ್ನು ಕೊಟ್ಟನು. ಈ ಹಣವನ್ನು ಶ್ರೀಮತಿ ಬ್ಯಾಗ್ಲಿ ಚೆಕ್ಕುಗಳ ರೂಪದಲ್ಲಿ ಪರಿವರ್ತಿಸಿ, ಶ್ರೀಮತಿ ಹೇಲ್ ಅವರಿಗೆ ಕಳಿಸಿಕೊಟ್ಟರು. ಸ್ವಾಮೀಜಿ ಡೆಟ್ರಾಯ್ಟ್‌ನಿಂದ ಒಹೈಯೋ ರಾಜ್ಯದ ಅಡಾ ಎಂಬ ಊರಿಗೆ ಫೆಬ್ರವರಿ ೨೩, ೧೮೯೪ರಂದು ಹೋದರು. ಅಲ್ಲಿ ಅಂದು ಸಂಜೆಯೇ 'ಮಾನವನ ದಿವ್ಯತೆ' ಎಂಬ ವಿಷಯವಾಗಿ ಭಾಷಣ ಮಾಡಿದರು.

ಆದರೆ ಇದಕ್ಕಷ್ಟೇ ಸ್ವಾಮೀಜಿಯವರ ಡೆಟ್ರಾಯ್ಟ್ ನಗರದ ಸಂಬಂಧ ಮುಗಿಯಲಿಲ್ಲ. ಅಲ್ಲಿನ ಅವರ ವಿರೋಧಿಗಳು ಸ್ವಾಮೀಜಿಯವರ ಮೇಲೆ ತಮ್ಮ ಟೀಕಾಪ್ರಹಾರವನ್ನು ಅವಿರತವಾಗಿ ಮುಂದುವರಿಸಿದರು. ಇದನ್ನು ಎದುರಿಸಲು ಸ್ವಾಮಿ ವಿವೇಕಾನಂದರು ಮತ್ತೊಮ್ಮೆ ಡೆಟ್ರಾಯ್ಟ್ ನಗರಕ್ಕೆ ಆಗಮಿಸಬೇಕಾಯಿತು, ಈ ಯುದ್ಧವನ್ನು ಗೆದ್ದೇ ತೀರಲು.

*(ಮುಂದುವರಿಯುವುದು)*

## ಅವರವರ ಧರ್ಮ

ಅದೊಂದು ನದೀತೀರ. ಸಾಧುವೊಬ್ಬನು ಸ್ನಾನ ಮಾಡುತ್ತಿದ್ದ. ಹರಿಯುತ್ತಿದ್ದ ನೀರಿನಲ್ಲಿ ಒಂದು ಚೇಳು ಜೀವ ಉಳಿಸಿಕೊಳ್ಳಲು ಹರಸಾಹಸ ಮಾಡುತ್ತಿತ್ತು. ಸಾಧು ತನಗರಿವಿಲ್ಲದೆಯೇ ಮುಳುಗಿ ಸಾಯುವುದರಲ್ಲಿದ್ದ ಅದನ್ನು ಕೈಯಲ್ಲೆತ್ತಿ, ಜೀವವುಳಿಸಲು ಯತ್ನಿಸಿದ. ಅದನ್ನಾತ ಹಿಡಿದುಕೊಂಡಿರುವಾಗಲೇ ಆ ಚೇಳು ಅವನನ್ನು ಕಡಿದುಬಿಡುವುದೆ!

ಚೇಳು ಕಡಿದ ನೋವಿನಿಂದಲೂ, 'ಅದು ಹೀಗೆ ಮಾಡಿತಲ್ಲಾ!' ಎಂಬ ಆಘಾತದಿಂದಲೂ ನರಳಿದ ಸಾಧು, ಅದನ್ನು ಮತ್ತೆ ನೀರಿಗೆ ಎಸೆದ. ಮತ್ತೊಮ್ಮೆ ಚೇಳು ನೀರಿನಿಂದ ಬದುಕಿ ಉಳಿಯಲು ಒದ್ದಾಡತೊಡಗಿತು. ಅದರ ಸಂಕಟ ನೋಡಲಾಗದೆ ಮತ್ತೆ ಸಾಧು ಅದನ್ನು ಕೈಯಲ್ಲೆತ್ತಿ ಬದುಕಿಸಲು ಹೊರಟ. ಎರಡನೇ ಸಲವೂ ಆ ಚೇಳು ಕಡಿದುಬಿಟ್ಟಿತು.

ಹೀಗೆ ಜೀವನಕ್ಕಾಗಿ ಹೋರಾಟ, ಬದುಕಿಸುವ ಪ್ರಯತ್ನ — ಈ ನಾಟಕ ಮುಂದುವರಿಯಿತು. ಮೂರು-ನಾಲ್ಕು ಬಾರಿ ಇದೇ ನಡೆಯಿತು. ಪ್ರತಿ ಬಾರಿ ಸಾಧು ಆ ಚೇಳುವನ್ನೆತ್ತಿ ಬದುಕಿಸಲು ಯತ್ನಿಸಿದಾಗಲೂ ಅದು ಕಡಿಯುತ್ತಿತ್ತು. ಕಡಿದಾಗ ನೋವು ತಾಳಲಾರದೆ ಅದನ್ನು ನೀರಿಗೆಸೆಯುತ್ತಿದ್ದ, ಮತ್ತೆ ಅದರ ಪರದಾಟ ನೋಡಲಾಗದೆ ಸಾವಿನಿಂದ ರಕ್ಷಿಸಲು ಯತ್ನಿಸುತ್ತಿದ್ದ.

''ಅದನ್ನು ಸಾಯಲು ಬಿಡಿ ಸ್ವಾಮಿ! ಅದನ್ನೇಕೆ ಬದುಕಿಸಲು ವ್ಯರ್ಥ ಪ್ರಯತ್ನ ಮಾಡುತ್ತಿದ್ದೀರಿ?'' ಎಂದ, ದಡದಲ್ಲಿ ನಿಂತಿದ್ದ ಒಬ್ಬ ವ್ಯಕ್ತಿ. ಅವನು ನಡೆಯುತ್ತಿದ್ದುದನ್ನೆಲ್ಲ ಆಶ್ಚರ್ಯಚಕಿತನಾಗಿ ನೋಡುತ್ತಿದ್ದ.

ಸಾಧು ಹೇಳಿದ: ''ಪ್ರತಿಯೊಬ್ಬನೂ ತನ್ನಲ್ಲೇನಿದೆ ಅದನ್ನು ಮಾತ್ರ ಕೊಡಬಲ್ಲ. ಚೇಳು ಕಡಿಯುವುದು ಬಿಟ್ಟರೆ ಬೇರೇನು ಮಾಡಬಲ್ಲುದು? ಕಡಿಯುವುದೇ ಅದರ ಧರ್ಮ. ಅದನ್ನು ಕಾಪಾಡುವುದು ಬಿಟ್ಟರೆ ನಾನು ಬೇರೇನು ಮಾಡಬಲ್ಲೆ?''

*(ಜೆ.ಪಿ.ವಾಸ್ವಾನಿ ಅವರ 'Snacks For the Soul' ಗ್ರಂಥದಿಂದ)*